ಕರ್ನಾಟಕ ಸರ್ಕಾರ

ಜಿಲ್ಲಾಧಿಕಾರಿಗಳ ಕಾರ್ಯಾಲಯ, ಜಿಲ್ಲಾಡಳಿತ ಭವನ, ಶಿಡ್ಲಘಟ್ಟ ರಸ್ತೆ, ಚಿಕ್ಕಬಳ್ಳಾಪುರ ಜಿಲ್ಲೆ – 562101

**OFFICE OF THE DEPUTY COMMISSIONER, ZILLADALITHA BHAVANA, SHIDLAGHATTA ROAD, CHIKKABALLAPUR DISTRICT - 562101**

---

ಸಂಖ್ಯೆ:ಎಮ್.ಐ.ಎಸ್/ಡಿ.ಎಮ್.ಎಫ್.ಟಿ/2019-20 672 ದಿನಾಂಕ:04.06.2019

## ಪತ್ರಿಕಾ ಪ್ರಕಟಣೆ

**ವಿಷಯ:** 2019-20ನೇ ಸಾಲಿನಲ್ಲಿ ಚಿಕ್ಕಬಳ್ಳಾಪುರ ಜಿಲ್ಲೆಯ ಸರ್ಕಾರಿ ಪ್ರೌಢಶಾಲೆಗಳಲ್ಲಿ ವಿದ್ಯಾರ್ಥಿಗಳ ಹಿತದೃಷ್ಠಿಯಿಂದ ಡಿ.ಎಂ.ಎಫ್.ಟಿ. ವತಿಯಿಂದ ಅತಿಥಿ ಕಂಪ್ಯೂಟರ್ ಶಿಕ್ಷಕರನ್ನು ನೇಮಕಾತಿ ಮಾಡಿಕೊಳ್ಳುವ ಬಗ್ಗೆ.

**ಉಲ್ಲೇಖ:** ದಿನಾಂಕ: 08-05-2019ರಂದು ಮಾನ್ಯ ಜಿಲ್ಲಾಧಿಕಾರಿಗಳು ಚಿಕ್ಕಬಳ್ಳಾಪುರ ಜಿಲ್ಲೆ ಚಿಕ್ಕಬಳ್ಳಾಪುರ ರವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ತೀರ್ಮಾನಿಸಿರುವಂತೆ.

**********

ವಿಷಯಕ್ಕೆ ಸಂಬಂಧಿಸಿದಂತೆ, ಸರ್ಕಾರಿ ಪ್ರೌಢಶಾಲಾ ವಿದ್ಯಾರ್ಥಿಗಳಗೆ ಮುಂದಿನ ವ್ಯಾಸಂಗದಲ್ಲಿ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಎದುರಿಸಲು ಕಂಪ್ಯೂಟರ್ ಜ್ಞಾನದ ಅನಿವಾರ್ಯತೆ ಇರುವುದರಿಂದ ಡಿ.ಎಂ.ಎಫ್.ಟಿ. ವತಿಯಿಂದ ಸದರಿ ಶಾಲೆಗಳಲ್ಲಿ ಕಂಪ್ಯೂಟರ್ ಲ್ಯಾಬ್ ಸೌಲಭ್ಯವನ್ನು ಒದಗಿಸಿ, ಕಂಪ್ಯೂಟರ್ ಆಧಾರಿತ ಶಿಕ್ಷಣ ಒದಗಿಸಲು ಅತಿಥಿ ಕಂಪ್ಯೂಟರ್ ಶಿಕ್ಷಕರನ್ನು ಡಿ.ಎಂ.ಎಫ್.ಟಿ. ವತಿಯಿಂದ ಅತಿಥಿ ಕಂಪ್ಯೂಟರ್ ಶಿಕ್ಷಕರನ್ನು ಶಿಕ್ಷಣ ಇಲಾಖೆಯ ಅತಿಥಿ ಶಿಕ್ಷಕರ ನೇಮಕಾತಿ ಮಾದರಿಯಲ್ಲಿ ತೆಗೆದುಕೊಳ್ಳಲು ತೀರ್ಮಾನಿಸಲಾಗಿದೆ.

ಆಸಕ್ತಿಯುಳ್ಳ ಅಭ್ಯರ್ಥಿಗಳು ಈ ಕೆಳಕಂಡ ಷರತ್ತುಗಳಿಗೆ ಒಳಪಟ್ಟು ದಿನಾಂಕ: 22.06.2019 ರಂದು ಸಂಜೆ 05:30 ಒಳಗಾಗಿ ಅರ್ಜಿ ಸಲ್ಲಿಸಬಹುದಾಗಿದೆ.

**ಷರತ್ತುಗಳು :**

1) ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು ಬಿ.ಎಸ್‌ಸಿ (ಕಂಪ್ಯೂಟರ್ ಸೈನ್ಸ್) ಅಥವಾ ಬಿ.ಸಿ.ಎ ಅಥವಾ ಡಿಪ್ಲೊಮಾ(ಕಂಪ್ಯೂಟರ್ ಸೈನ್ಸ್) ಅಥವಾ ತತ್ಸಾಮಾನ ವಿದ್ಯಾರ್ಹತೆ ಹೊಂದಿರತಕ್ಕದ್ದು.
2) ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು 35 ವರ್ಷದ ವಯೋಮಿತಿಯಲ್ಲಿರಬೇಕು.
3) ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು ಸ್ಥಳೀಯ ಅಭ್ಯರ್ಥಿಗಳಾಗಿದ್ದಲ್ಲಿ ಆದ್ಯತೆ ನೀಡಲಾಗುವುದು.
4) ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು ಈಗಾಗಲೇ ಕಂಪ್ಯೂಟರ್ ಶಿಕ್ಷಕರಾಗಿ ಸೇವೆ ಸಲ್ಲಿಸಿರುವ ಅನುಭವ ಹೊಂದಿದ್ದಲ್ಲಿ, ಅಂತಹ ಅಭ್ಯರ್ಥಿಗಳಿಗೆ ಆದ್ಯತೆ ನೀಡಲಾಗುವುದು.
5) ಲಿಖಿತ ಪರೀಕ್ಷೆ ಮತ್ತು ಸಂದರ್ಶನದ ಮೂಲಕ ಅಭ್ಯರ್ಥಿಗಳನ್ನು ಆಯ್ಕೆಮಾಡಲಾಗುವುದು ಹಾಗೂ ಲಿಖಿತ ಪರೀಕ್ಷೆಯ ದಿನಾಂಕ ಮತ್ತು ವೇಳೆಯನ್ನು ಶೀಘ್ರದಲ್ಲಿ ಜಿಲ್ಲಾ ವೆಬ್ ಸೈಟ್‌ನಲ್ಲಿ ಪ್ರಕಟಿಸಲಾಗುವುದು.
6) ತಾತ್ಕಾಲಿಕವಾಗಿ ಆಯ್ಕೆಮಾಡಲಾದ ಅತಿಥಿ ಕಂಪ್ಯೂಟರ್ ಶಿಕ್ಷಕರಿಗೆ ಪ್ರತಿ ಮಾಹೆ ರೂ.8,000-00ಗಳ ಸಂಭಾವನೆಯನ್ನು ತೃಪ್ತಿದಾಯಕ ಕಾರ್ಯನಿರ್ವಹಣೆ ಅನುಸಾರ ಆಯಾ ಶಾಲೆಯ ಎಸ್.ಡಿ.ಎಂ.ಸಿ. ಮೂಲಕ ಪಾವತಿಸಲಾಗುವುದು.
7) ತಾತ್ಕಾಲಿಕವಾಗಿ 10 ತಿಂಗಳಿಗೆ ನೇಮಕಾತಿ ಮಾಡಿಕೊಳ್ಳುವ ಅತಿಥಿ ಕಂಪ್ಯೂಟರ್ ಶಿಕ್ಷಕರನ್ನು ಮಾರ್ಚ್-31ರಂದು ಬಿಡುಗಡೆಗೊಳಿಸಲಾಗುವುದು.
8) ಅತಿಥಿ ಕಂಪ್ಯೂಟರ್ ಶಿಕ್ಷಕರನ್ನು ತಾತ್ಕಾಲಿಕವಾಗಿ ಆಯ್ಕೆಮಾಡುವ ಹಾಗೂ ತಿರಸ್ಕರಿಸುವ ಅಧಿಕಾರ ಡಿ.ಎಂ.ಎಫ್.ಟಿ. ಟ್ರಸ್ಟ್ ಹೊಂದಿರುತ್ತದೆ.

9) ತಾತ್ಕಾಲಿಕವಾಗಿ ಆಯ್ಕೆ ಮಾಡಲಾದ ಅತಿಥಿ ಕಂಪ್ಯೂಟರ್ ಶಿಕ್ಷಕರ ಕರ್ತವ್ಯನಿರ್ಲಕ್ಷ್ಯತೆ ಹಾಗೂ ಅಸಭ್ಯ ವರ್ತನೆ ಕಂಡುಬಂದಲ್ಲಿ ಆಯ್ಕೆಯನ್ನು ರದ್ದುಮಾಡುವ ಅಧಿಕಾರ ಡಿ.ಎಂ.ಎಫ್.ಟಿ. ಟ್ರಸ್ಟ್ ಹೊಂದಿರುತ್ತದೆ.

10) ತಾತ್ಕಾಲಿಕವಾಗಿ ಆಯ್ಕೆಮಾಡುವ ಅಭ್ಯರ್ಥಿಗಳು ರೂ.100.00 ಗಳ ಬೆಲೆಯುಳ್ಳ ಮುದ್ರಾಂಕಿತ ಕಾಗದದಲ್ಲಿ (E-Stamp Paper) ಶಾಲಾ ಮುಖ್ಯಸ್ಥರಿಗೆ ಹಾಗೂ ನಿಮ್ಮ ಹೆಸರಿನಲ್ಲಿ ತಂದು ಕೆಲಸಕ್ಕೆ ಸೇರ್ಪಡೆಯಾಗುವಾಗ ಹತ್ತು ತಿಂಗಳಿಗೆ ಮಾತ್ರ ಎಂದು ಕರಾರು ಮಾಡಿಕೊಳ್ಳುವುದು.

11) ನಿವಾಸಿ ಧೃಡೀಕರಣ ಪತ್ರ ಹಾಗೂ ವಿದ್ಯಾರ್ಹತೆಗೆ ಸಂಬಂಧಿಸಿದ ದಾಖಲೆಗಳನ್ನು ಸಲ್ಲಿಸುವುದು.

12) ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಖನಿಜ ಪ್ರತಿಷ್ಠಾನ ಟ್ರಸ್ಟ್ ಸಮಿತಿ, ಜಿಲ್ಲಾಡಳಿತ ಭವನ, ಚಿಕ್ಕಬಳ್ಳಾಪುರ ಜಿಲ್ಲೆ, ರವರನ್ನು ಸಂಪರ್ಕಿಸಬಹುದು ದೂರವಾಣಿ ಸಂಖ್ಯೆ: 08156-277075.

13) ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: -06-2019 @ 05:30.

14) ಅರ್ಜಿಗಳನ್ನು https://chikkaballapur.nic.in ಮೂಲಕ ಮಾತ್ರ ಸಲ್ಲಿಸುವುದು.

ಜಿಲ್ಲಾಧಿಕಾರಿಗಳು ಹಾಗೂ ಅಧ್ಯಕ್ಷರು
ಜಿಲ್ಲಾ ಖನಿಜ ಪ್ರತಿಷ್ಠಾನ ವ್ಯವಸ್ಥಾಪನ ಸಮಿತಿ
ಚಿಕ್ಕಬಳ್ಳಾಪುರ ಜಿಲ್ಲೆ.

ಪ್ರತಿಯನ್ನು:

1. ಹಿರಿಯ ಸಹಾಯಕ ನಿರ್ದೇಶಕರು, ವಾರ್ತಾ ಮತ್ತು ಪ್ರಚಾರ ಇಲಾಖೆ, ಚಿಕ್ಕಬಳ್ಳಾಪುರ ಜಿಲ್ಲೆ,
2. ಡಿ.ಐ.ಒ, ಎನ್.ಐ.ಸಿ ಇಲಾಖೆ, ಜಿಲ್ಲಾಡಳಿತ ಭವನ, ಚಿಕ್ಕಬಳ್ಳಾಪುರ ಜಿಲ್ಲೆ,
3. ಕಛೇರಿ ಪ್ರತಿ.